ಸೆಷ್ಷಗೆ ಕಮ್ಮಿಟ್ ಮಾಡಲು ಅಧಿಕಾರ ಹೊಂದಿರುವ ಮೈಸೂರು ಡಿಸ್ಟ್ರಿಕ್ಟಿನೊಳಗಣ ಮಾಜಿಸ್ಟ್ರೇಟರುಗಳು, ತಾವು ಕಮ್ಮಿಟ್ ಮಾಡುವ ಮೊಕದ್ದಮೆಗಳಲ್ಲಿ ಕಕ್ಷಿಗಾರರನ್ನೂ, ಸಾಕ್ಷಿಗಳನ್ನೂ ಮೇಲೆ ಕಂಡ ತಾರೀಖುಗಳಲ್ಲಿ ಮೈಸೂರಿನಲ್ಲಿ ಸೆಷ್ಷ ಕೋರ್ಟು ರೂಬರೂ ಹಾಜರಾಗುವ ಬಗ್ಗೆ ಮುಚ್ಚಲಿಕೆ ತೆಗದುಕೊಳ್ಳತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟಿರುತ್ತಾರೆ.

2. ಮೇಲ್ಕಂಡ ತಾರೀಖುಗಳಲ್ಲಿ ಮಾಮೂಲ್ ಮೇರಿಗೆ ಪೋಲೀಸ್ ಏಪಾರ್ಡು ಮಾಡುವಂತೆ ಡಿಸ್ಟ್ರಿಕ್ಟು ಮಾಜಿಸ್ಟ್ರೇಟರು ಕೋರಲ್ಪಟ್ಟಿರುತ್ತಾರೆ.

ವಿ. ಯ್ಕ. ನರಸಿಂಹಯ್ಯಂಗಾರ್,
ಸೆಷ್ಷ ಜಡ್ಜ್.

ನಂ. 10 ತಾರೀಖು 27ನೇ ನವಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಅರಕಲ್‌ಗೂಡು ಸಬ್ ರಿಜಿಸ್ಟ್ರೀ ಆಫೀಸಿನಲ್ಲಿ ಬೇವಾರಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನು ಹಾಜರ್ ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರಾಯಾ ಹಕ್ಕುದಾರರಾಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಆವುಗಳನ್ನು ವಾಪಸ್ ತೆಗದುಕೊಳ್ಳಬೇಕು. ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷ್ಣ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅವುಗಳು ನಾಶಪಡಿಸಲ್ಪಡುವವು.

ನಂಬರು.	ದಸ್ತಾವೇಜು ಬರೆದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರೆಸಿ ಕೊಂಡವನ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
74 ——— 1881—82	ಮರೂರು ಗ್ರಾಮದಲ್ಲಿರುವ ಶ್ರೀವೈಷ್ಣವ ಬ್ರಾಹ್ಮಣ ಶ್ರೀನಿವಾಸಯ್ಯನವರ ಮಗ ರಾಮಸ್ವಾಮಿ 1 ವೆಂಕಟಾಚಾರು) 1	ಮರೂರು ಗ್ರಾಮದಲ್ಲಿ ಇರುವ ನಾಂತರಾಜೆ ಅರಸಿನವರ ಮಗ ಚಿಕ್ಕ ಅರಸು	3—6—81	3—6—81	75 ರೂಪಾಯಿನ ಜಮ್ಮೀ ಸಂಬಂಧವಾದ ಭೋಗ್ಯ ಪತ್ರ.
75 ——— ಡಿಟೋ	ರಾಮನಾಥಪುರದಲ್ಲಿರುವ ಸಂಕೇತಿಬ್ರಾಹ್ಮಣ ನರಸಿಂಹ್ಮವಧಾನಿಗಳ ಮಗ ರಾಮಾವಧಾನಿ	ಅರಕಲ್‌ಗೂಡು ತಾಲ್ಲೂಕು ಕಚೇರಿ	4—6—81	4—6—81	302 ರೂಪಾಯಿನ ಜಾಮ್ಮೀ ಮುಚ್ಚಳಿಕೆ ಮೊಬಲಗ್ಯೆ ಭೂಸ್ಥಿತಿ ಯೀಡು ಮಾಡಿರುವದಾಗಿ.
125 ——— ಡಿಟೋ	ಸರ್ವ ಮಾನ್ಯ ಮೂಯಿ ಗೌಜನಹಳ್ಳಿಲ್ಲಿರುವಪಂಚಾಳದ ಜಾತಿ ಕೊಟ್ಟೂರಯ್ಯನವರ ಮಗ ಬಡಾಇ ಈಸಬಿನಿಂದ ಜೀವಿಸುವ ವೀರಾಚಾರಿ	ಹಾಡ್ಯ ಗ್ರಾಮದಲ್ಲಿರುವ ವೀರಾಚಾರದ ದೊಡ್ಡ ಹಟ್ಟಿಯ ಜನ್ನ ವೀರಪ್ಪನ ಮಗ ಆರಂಬದ ಈಸಬಿನ ವೀರಭದ್ರಯ್ಯ	9—7—81	9—7—81	95 ರೂಪಾಯಿನ ಭೂಸ್ಥಿತಿ ಕ್ರಯ ಪತ್ರ.

ನಂ. 11. ತಾರೀಖು 6ನೇ ಡಿಶಂಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಮೈಸೂರು ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಬೇವಾರಸ್ಸಾಗಿ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನು ಹಾಜರ್ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರಾಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು 1 ತಿಂಗಳ ವಳಗಾಗಿ ಸಬ್ ರಿಜಿಸ್ಟ್ರಾರ್ರ ರೂಬರೂ ಹಾಜರಾಗಿ ಅವುಗಳನ್ನು ವಾಪಸು ತೆಗದುಕೊಳ್ಳಬೇಕು, ತಪ್ಪಿದರೆ 1877ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷ್ಣ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ಅವುಗಳು ನಾಶಪಡಿಸಲ್ಪಡುವವು.

ನಂಬರ್.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜನ್ನು ಬರಸುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿಯ ತಾರೀಖು.	ದಸ್ತಾವೇಜಿನ ಸ್ವಭಾವ ವ ಕ್ಯುತ್ತು.
114 ——— 82—83	ಮೈಸೂರು ಮಂಡಿ ಮಹಲಾ ದಲ್ಲಿ ಇರುವ ದೇವಾಂಗದ ಜಾತಿ ಜವಳಿ ವ್ಯಾಪಾರದ ದುಂಡೈಯ್ಯನ ಮಗ ರಂಗಣ್ಣ.	ಮೈಸೂರು ಲಷ್ಕರ್ ನೊಹ ಲೇಲಿರುವ ದೇವಾಂಗದ ಜಾತಿ ಜವಳಿ ವ್ಯಾಪಾರದ ಚಿಕ್ಕತಿಂ ಮಯ್ಯನ ಮಗ ದಾಸಂಣ.	30—5—82	2—6—82	75 ರೂಪ್ತಾಯಿನ ಮನೆ ಅದಾರದ ಪತ್ರ
636 ——— 81—82	ಮೈಸೂರು ಇಟ್ಟಿಗೆ ಗೂಡಿನ ಲ್ಲಿ ಇರುವ ಪಂಚಾಳದ ಜಾತಿ ಕಾತಮೇಸ್ತ್ರಿ ಮಕ್ಕಳು ಚಾ ಮುಂಡಾಚಾರಿ, ಕಿರೀ ಮಗ ಲ ಕ್ಷ್ಮಣಾಚಾರಿ, ಮಧ್ಯಮಗ ನಾ ರಣಾಚಾರಿ.	ಮೈಸೂರು ಇಟ್ಟಿಗೆ ಗೂಡಿನ ಲ್ಲಿ ಇರುವ ಪಂಚಾಳದ ಜಾತಿ ಕಾತಮೇಸ್ತ್ರಿ ಮಕ್ಕಳು ಚಾ ಮುಂಡಾಚಾರಿ ಕಿರಿಮಗ ಲಕ್ಷ್ಮ ಣಾಚಾರಿ ಮಧ್ಯೆ ಮಗ ನಾರ ಣಾಚಾರಿ.	20—1—82	23—1—82	90 ರೂಪಾಯಿನ ಸ್ಥಿತಿ ಹಂಚಿ ಕೊಂಡ ವಿಭಾಗ ಪತ್ರ.
738 ——— 81—82	ಮೈಸೂರು ಜೊಸಅಗ್ರಹಾರ ದಲ್ಲಿ ಇರುವ ಕವಾಚಾರ ಜಾತಿ ನಶ್ಯದ ಚನ್ನಪ್ಪನ ಮಗ ಅರ ಳಿ ಮನೆ ಚಾಕರಿವುಳ್ಳ ನಂಜಪ್ಪ.	ಅಸಿಸ್ಟೆಂಟ್ ಕಮ್ಮಿರ್ಯ ಕೃಷ್ಣಸ್ವಾಮಯ್ಯಂಗಾರ್ ಮಕ್ಕಳು ಎಂ. ಬಿ. ರಾಮಸ್ವಾಮಯ್ಯಂಗಾರ್.	7—3—82	9—3—82	450 ರೂಪಾಯಿನ ಹೆಂಚಿನ ಅಂಗಡಿ ವಗ್ಗೈರೆ ಕ್ರಯಪತ್ರ.
799 ——— 81—82	ಮೈಸೂರು ಶ್ರೀರಾಂ ಪೇಟೇಲಿ ರುವ ವೆಂಕಟರಮಣಯ್ಯನ ಮಗ ಲೇಟ್ ಅಪ್ಪಗ್ಯಾಂ ಡಿವಿ ಜರ್ ಸೆರ್ಷ ಕೋರ್ಟು ಅಸಿಸ್ಟೆಂ ಟ್ ರಿಕಾರಡ್ ಕೀಪರ್ ಸಿ. ಸುಬ್ಬ ರಾವ್	ಮೈಸೂರು ಶ್ರೀರಾಂ ಪೇಟೇಲಿ ರುವ ವೈಶ್ಯರ ನಾಭಾವೆಂಕಟೇಶ ಯ್ಯನ ಮಗ ಪಸಾರಿ ಅಂಗಡಿ ವೈಶ್ಯರ ನಾಭಾನಾರಣಪೆಟ್ಟಿ.	23—3—82	29—3—82	ತಿಂಗಳು 1ಕ್ಕೆ 3—12—0 ಮೇರಿ ಗೆ 4 ವರುಷಕ್ಕೆ ಹುಟ್ಟದ ಮನೆ ಭಾಡಾ ದಸ್ತ್ರೈವಜ್ಞ.

ಅಬ್ದುಲ್‌ಖಾದರ್, ಕೆ. ಬಿ..
ರಿಜಿಸ್ಟ್ರಾರ್.

ನಗರ ಡಿವೀರ್ಜ.

ನಗರ ಡಿವೀರ್ಜ ಡಿಸ್ಟ್ರಿಕ್ಟ್ ಜಡ್ಜ್‌ರ್ಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜಿ ನಂಬರ್ 131.

ವೃತಪಟ್ಟ ನಾರಾಯಣಯ್ಯ ಯಂಬವನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕೃಷ್ಣಪ್ಪ, ವೃತಪಟ್ಟ ಸದರೀ ನಾರಾಯಣಯ್ಯ ಯಂಬವನಿಗೆ ಸಹೋದರನು ಆಗಬೇಕೆಂಬ ಹಕ್ಕುದಾರೀ ಮೇಲೆ ಮೂಡಗೆರೆ ತಾಲ್ಲೂಕು ಕಳಸದ ಮಾಗಣಿ ಮೇಲಂಗಡಿ ಸ್ಥಳದ ಕೃಷ್ಣಪ್ಪ ಯಂಬವನು ಸದರೀ ಮೇಲಂಗಡಿ ವಾಸಸ್ಥನಾಗಿ ವೃತಪಟ್ಟ ನಾರಾಯಣಯ್ಯ ಯಂಬವನ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಅಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕೃಷ್ಣಪ್ಪ ಯಂಬವನ ಅರ್ಜೀಯನ್ನು 1885ನೇ ಇಸವಿ ಜನವರಿ ತಿಂಗಳು ತಾರೀಖು 31ರಲ್ಲು ಕೇಳಿ ಸರಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೃತಪಟ್ಟ ನಾರಾಯಣಯ್ಯ ಯಂಬವನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಡಿಸಂಬರ್ ತಿಂಗಳು 9ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿನಿ ನಮ್ಮ ದಸ್ತಖತೊಡನೆ ಕೊಡೋಣಾಗಿದೆ.